

> ಕೇವಲ ಮೂರ್ನಾಲ್ಕು ದಶಕಗಳ ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಊಟದ ಭಾಗವಾಗಿದ್ದ ಸಿರಿಧಾನ್ಯ ಮತ್ತು ಬೇಳೆಕಾಳುಗಳು ಈಗ ಕಾಣೆಯಾಗಿವೆ. ಹಳ್ಳಿಯಲ್ಲಿ ಬೇಸಾಯ ಕಣ್ಮರೆಯಾಗುತ್ತಿರುವ ಈ ದಿನಗಳಲ್ಲಿ ಒಕ್ಕಲುತನಕ್ಕೆ ಮಹತ್ವ ಕೊಡಬೇಕು. ಆದರೆ ಅದರ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಡುವವರೇ ಕಡಿಮೆಯಾಗಿದ್ದಾರೆ. ನಾವು ಸುಸ್ಥಿರ ಬೇಸಾಯದ ಜತೆಗೆ, ಪರಿಸರಕ್ಕೆ ಪೂರಕವಾದ ಪದ್ಧತಿಗಳನ್ನು ಹೇಳುತ್ತ ಶುದ್ಧ ಮತ್ತು ಸಾಂಪ್ರದಾಯಿಕ ಆಹಾರ ಉತ್ಪಾದನೆ ಕುರಿತು ಅರಿವು ಮೂಡಿಸುತ್ತೇವೆ. ಕೃಷಿ ಅಂದರೆ ಒಂದೇ ಬೆಳೆ ಅಲ್ಲವಲ್ಲ? ಆಹಾರ ಮತ್ತು ಪೋಷಕಾಂಶ ಭದ್ರತೆ ಕೊಡುವ ಮಿಶ್ರ ಬೆಳೆಯ ಅಕ್ಕಡಿ ಪದ್ಧತಿಯನ್ನು ಜನಪ್ರಿಯಗೊಳಿಸುತ್ತಿದ್ದೇವೆ. ಮಹಿಳಾ ಗುಂಪಿನ ಸದಸ್ಯರೆಲ್ಲ ನಿರಂತರವಾಗಿ ಕೆಲಸ ಮಾಡುತ್ತ, ರೈತರನ್ನು ಪರಿಸರಸ್ನೇಹಿ ಕೃಷಿ ಮತ್ತು ಮೌಲ್ಯವರ್ಧನೆಯತ್ತ ಪ್ರೇರೇಪಿಸಿ, ವಿಷಮುಕ್ತ ಆಹಾರದ ಬಳಕೆ ಮಾಡುವಂತೆ ಗ್ರಾಹಕ ಸಮುದಾಯದಲ್ಲಿ ಜಾಗೃತಿ ಮೂಡಿಸುತ್ತಿದ್ದೇವೆ.
>
> **-ಬೀಬಿ ಜಾನ್ ಹಳೇಮನಿ,**
> **ಬೀಬಿ ಫಾತಿಮಾ ಮಹಿಳಾ ಸಂಘ**



ಕೆಲವೇ ತಿಂಗಳುಗಳ ಹಿಂದೆ ಕನ್ನಡಕ್ಕೆ ಬೂಕರ್ ಪ್ರಶಸ್ತಿಯ ಗೌರವ ಸಂದಿತು. ಮುಸ್ಲಿಂ ಹೆಣ್ಣುಮಗಳು ಬಾನು ಮುಷ್ತಾಕ್ ಅವರ ದಶಕಗಳ ಸಾಹಿತ್ಯ ಕೃಷಿಗೆ ದೊರೆತ ಅಂತರರಾಷ್ಟ್ರೀಯ ಮನ್ನಣೆ ಇದು. ಕಳೆದ ವಾರ ಬೀಬಿ ಫಾತಿಮಾ ಮಹಿಳಾ ಸಂಘವು ಮತ್ತೊಂದು ಅಂತರರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಯಿತು. ಇದು ಕೃಷಿ ಕ್ಷೇತ್ರಕ್ಕೆ ಸಂದ ಗೌರವ. ಅದರಲ್ಲಿಯೂ ಉತ್ತರ ಕರ್ನಾಟಕದ ಮಹಿಳೆಯರ ಶ್ರಮಕ್ಕೆ ಸಿಕ್ಕ ಅತ್ಯುನ್ನತ ಮನ್ನಣೆ.

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ತೀರ್ಥ ಎಂಬ ಪುಟ್ಟ ಹಳ್ಳಿಯ ಮಹಿಳಾ ಗುಂಪು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮವು (United Nations Development Programme UNDP) ನೀಡುವ 2025ನೇ ವರ್ಷದ 'ಈಕ್ವೇಟರ್ ಇನಿಷಿಯೇಟಿವ್ ಪ್ರಶಸ್ತಿ'ಯನ್ನು ಪಡೆದುಕೊಂಡಿದೆ, ಇದನ್ನು ಜೀವವೈವಿಧ್ಯ ಸಂರಕ್ಷಣೆಗಾಗಿ ನೀಡುವ ನೊಬೆಲ್ ಪ್ರಶಸ್ತಿ ಎಂದೇ ಕರೆಯಲಾಗುತ್ತದೆ.

ಜಗತ್ತಿನ 103 ದೇಶಗಳ 700 ಸ್ಪರ್ಧಿಗಳು ಈ ಪ್ರಶಸ್ತಿಗಾಗಿ ಭಾಗವಹಿಸಿದ್ದವು. ಭಾರತದ ಬೀಬಿ ಫಾತಿಮಾ ಮಹಿಳಾ ಸಂಘವು ಅರ್ಜೆಂಟೈನಾ, ಪೆರು, ತಾಂಜೇನಿಯಾ, ಇಂಡೊನೇಷಿಯಾ, ಬ್ರೆಜಿಲ್, ಈಕ್ವೆಡಾರ್, ಪಪು ನ್ಯೂ ಗುನಿಯ, ಕೀನ್ಯಾ ದೇಶಗಳ 9 ಸಾಧಕ ಸಂಸ್ಥೆಗಳ ಜೊತೆ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ. ಭಾರತದಿಂದ ಪ್ರಶಸ್ತಿ ಗೆದ್ದ ಏಕೈಕ ಗುಂಪು.

'ವಿಶ್ವ ಮೂಲನಿವಾಸಿ ಜನರ ದಿನ'ದಂದು (ಆಗಸ್ಟ್ 9) ಈ ಪ್ರಶಸ್ತಿ ಘೋಷಿಸಲಾಯಿತು. ಪ್ರಶಸ್ತಿಯು 10,000 ಡಾಲರ್ (ಸುಮಾರು ₹8.5 ಲಕ್ಷ) ನಗದು ಬಹುಮಾನ ಒಳಗೊಂಡಿದೆ.

ಸಮುದಾಯ ಬೀಜ ಬ್ಯಾಂಕ್, ಸಿರಿಧಾನ್ಯ ಸಂಸ್ಕರಣಾ ಘಟಕ, 30 ಗ್ರಾಮಗಳಲ್ಲಿ ನೈಸರ್ಗಿಕ ಕೃಷಿ ಮತ್ತು ದೇಸಿ ಬೀಜ ವೈವಿಧ್ಯತೆಯನ್ನು ಮರಳಿ ತಂದ ಮಹಿಳಾ ಸಂಘದ ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.

ಈ ಮಹಿಳಾ ಸಂಘದ ಹೆಸರು ಮಾತ್ರ ಬೀಬಿ ಫಾತಿಮಾ. ಆದರೆ ಹಿಂದೂ ಮತ್ತು ಮುಸ್ಲಿಂ ಮಹಿಳೆಯರಿಬ್ಬರೂ ಸದಸ್ಯರಾಗಿದ್ದಾರೆ. ಇಲ್ಲಿ ಸಲ್ಮಾ, ಆಯೇಷಾರೂ ಇದ್ದಾರೆ, ಲಕ್ಷ್ಮವ್ವ, ಶ್ರೀದೇವಿಯೂ ಇದ್ದಾರೆ. ಅದೇ ವೈಶಿಷ್ಟ್ಯ. ಭಾವೈಕ್ಯತೆ ಮತ್ತು ಸಾಮರಸ್ಯದ ಅತ್ಯುತ್ತಮ ಉದಾಹರಣೆ. ಎಷ್ಟಾದರೂ ಶಿಶುನಾಳ ಷರೀಫರ ಹುಟ್ಟೂರಿನ ತಾಲ್ಲೂಕಿನವರಲ್ಲವೇ. ಇವರೆಲ್ಲಾ ತೀರ್ಥ ಎಂಬ ಎರಡೇ ಅಕ್ಷರದ, ಅಪರೂಪದ ಹೆಸರಿನ ಹಳ್ಳಿಯಲ್ಲಿ ತಮ್ಮಷ್ಟಕ್ಕೆ ತಾವು ದುಡಿಮೆ ಮಾಡುವವರು. ಈ ಮಹಿಳಾ ಸಂಘವು ಮಳೆಯಾಶ್ರಿತ ಜಮೀನುಗಳಲ್ಲಿ ಪರಿಸರಸ್ನೇಹಿ ಕೃಷಿ ವಿಧಾನ ಅಳವಡಿಕೆ, ಸಮುದಾಯ ಬೀಜ ಬ್ಯಾಂಕ್, ಆಹಾರ ಪೋಷಕಾಂಶ ಭದ್ರತೆ, ಸಿರಿಧಾನ್ಯ ಬೇಸಾಯ, ಸಂಸ್ಕರಣಾ ಘಟಕ ನಿರ್ವಹಣೆ ಹಾಗೂ ಮೌಲ್ಯವರ್ಧನೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದೆ. ಸುಮಾರು 30 ಗ್ರಾಮಗಳಲ್ಲಿ